Code No. : **DTA-02**

## ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 3

## ಡಿಪ್ಲೋಮಾ ಇನ್ ಥಿಯೇಟರ್ ಆರ್ಟ್ಸ್ ಪರೀಕ್ಷೆ, ನವೆಂಬರ್ – 2020

# ನಾಟಕ ಇತಿಹಾಸ

## ಪತ್ರಿಕೆ – II

ದಿನಾಂಕ : 03. 11. 2020 ]

ಸಮಯ : ಬೆಳಗ್ಗೆ 9.00 ರಿಂದ ಮಧ್ಯಾಹ್ನ 12.00 ರವರೆಗೆ ] [ ಗರಿಷ್ಠ ಅಂಕಗಳು : 50

### ವಿಭಾಗ – ಎ

1. 'ಅಭಿಜ್ಞಾನ ಶಾಕುಂತಲ' ನಾಟಕದಲ್ಲಿ ಕಂಡುಬರುವ ಚಿಗುರೆ ಹಾಗೂ ಭ್ರಮರ ಸಂಕೇತಗಳು ಆ ನಾಟಕದ ಮುಖ್ಯ ಪಾತ್ರಗಳ ವ್ಯಕ್ತಿತ್ವವನ್ನು ಹೇಗೆ ಪ್ರತಿಬಿಂಬಿಸುತ್ತವೆ ? ವಿಚಾರ ಮಾಡಿ. 10

*ಅಥವಾ*

ಶೂದ್ರಕನ 'ಮೃಚ್ಛಕಟಿಕ' ಪ್ರಕರಣದಲ್ಲಿ ಆಭರಣ ಮತ್ತು ಬಂಡಿಗಳ ಅದಲು ಬದಲು ಪ್ರಸಂಗಗಳ ಪ್ರಾಮುಖ್ಯತೆಯನ್ನು ಗುರುತಿಸಿ.

2. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಎರಡಕ್ಕೆ*** ಟಿಪ್ಪಣಿ ಬರೆಯಿರಿ : 2 × 5 = 10

ಅ) ಶಾಕುಂತಲೆ

ಬ) ಭವಭೂತಿ

ಕ) ಶರ್ವಿಳಕ

ಡ) ಚೋರ ಚರಣದಾಸ

### ವಿಭಾಗ – ಬಿ

3. 'ಮ್ಯಾಕ್‌ಬೆತ್' ನಾಟಕದಲ್ಲಿ ಮ್ಯಾಕ್‌ಬೆತ್ ಮತ್ತು ಲೇಡಿ ಮ್ಯಾಕ್‌ಬೆತ್ ಪಾತ್ರಗಳ ವಿರುದ್ಧ ಚಲನೆಯ ಬೆಳವಣಿಗೆಯನ್ನು ಕಥಾನಕದ ಹಿನ್ನೆಲೆಯಲ್ಲಿ ಚರ್ಚಿಸಿ. 10

*ಅಥವಾ*

ಮನುಷ್ಯನ ಬದುಕು ಹಳೆಯ ಭಗ್ನಸ್ಥಿತಿಯಿಂದ ಹೊಸ ವಿಕಾಸದ ಹಾದಿಗೆ ಹೊರಳಿಕೊಳ್ಳುವ ಚಿತ್ರಣವನ್ನು ಚೆಕಾಫ್‌ನ 'ಚೆರ್ರಿ ತೋಪು' ಹೇಗೆ ಕಟ್ಟಿಕೊಡುತ್ತದೆ ? ಎಂದು ವಿವರಿಸಿ.

4. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಎರಡಕ್ಕೆ*** ಟಿಪ್ಪಣಿ ಬರೆಯಿರಿ : 5 + 5

ಅ) ಹೆನ್ರಿಕ್ ಇಬ್ಸನ್

ಬ) ಸ್ಯಾಮುಯೆಲ್ ಬೆಕೆಟ್

ಕ) ತಾರ್ತೂಫ್

ಡ) ಅಂಡಿಗೊನೆ

## ವಿಭಾಗ – ಸಿ

5. ಚಾರಿತ್ರಿಕ ವಸ್ತು ವಿನ್ಯಾಸಗಳಲ್ಲಿ ಸಂಸ ಮತ್ತು ಗಿರೀಶ್ ಕಾರ್ನಾಡರು ರಾಜಕೀಯ ಪ್ರಭುತ್ವದ ಒಳಸುಳಿಗಳನ್ನು ಚಿತ್ರಿಸುವ ಬಗೆಯನ್ನು ಸ್ಥೂಲವಾಗಿ ವಿವರಿಸಿ. 10

***ಅಥವಾ***

ಕನ್ನಡ ನಾಟಕ ಪರಂಪರೆಯನ್ನು ಗಮನದಲ್ಲಿಟ್ಟುಕೊಂಡು ಈ ಕೆಳಕಂಡ ಎರಡೂ ನಾಟಕಗಳ ಸಂದರ್ಭ–ಸ್ವರೂಪ ಮತ್ತು ವೈಶಿಷ್ಟ್ಯಗಳನ್ನು ಸ್ಥೂಲವಾಗಿ ವಿವರಿಸಿ :

ಅ) 'ತುಘಲಕ್'

ಬ) 'ಗುಣಮುಖ'